
ಅವರನ್ನು ಅಣಕ ಮಾಡಿ ಹಂಗಿಸುವಂತಾಗುತ್ತದೆ ಎಂಬುದರ ಚೂರೂ ಅರಿವಿಲ್ಲದ ಅಸೂಕ್ಷ್ಮ ರಂಜನೆ ಇದು. ಮತಿಭ್ರಮಣೆಗೊಳಗಾದ ಭಿಕ್ಷುಕಿ ಅಂದ ತಕ್ಷಣ ಕೆದರಿದ ಕೂದಲು, ಹರಕು ಕಾಗದಗಳು, ವಿಚಿತ್ರ ಹಾವಭಾವ, ಹರಕಲು ಸೀರೆ, ನಾಟಕೀಯ ಚೀರಾಟ, ದೃಷ್ಟಿ ಮಾಂದ್ಯರು ಅಂತ ತಕ್ಷಣ ಕೈಲಿ ಕೋಲು ಹಿಡಿದು ಅಥವಾ ಎರಡೂ ಕೈ ಮುಂದು ಮಾಡಿ (ಸಿನಿಮಾ ಪ್ರಭಾವ) ಎಡವುತ್ತ ನಡೆಯುವುದು, ಎಡವಿದಾಗೆಲ್ಲ ಪ್ರೇಕ್ಷಕರಲ್ಲಿರುವ ವಿದ್ಯಾರ್ಥಿ ವೃಂದ ಕೇಕೆ ಹಾಕಿ ನಗುವುದು – ಇವೆಲ್ಲ ಅಕ್ಷಮ್ಯ ಸಂಗತಿಗಳು. ಮಾನವೀಯ ಕಳಕಳಿಯನ್ನೂ ಜವಾಬ್ದಾರಿಯನ್ನೂ ಎಚ್ಚರಿಸದ ಇಂಥ ಕಲಾಪ ಮಕ್ಕಳ ಮನಸ್ಸನ್ನು ಅಸೂಕ್ಷ್ಮಗೊಳಿಸುತ್ತದೆ ಮತ್ತು ಯಾರ ಕುಟುಂಬದಲ್ಲಿ, ಬಳಗದಲ್ಲಿ ಅಂಥ ಭಿನ್ನರಿರುತ್ತಾರೋ ಅವರಿಗೆ ಮೂಕ ಹತಾಶ ವೇದನೆಯನ್ನುಂಟು ಮಾಡುತ್ತದೆ. ಅಂಥವರ ಬಗ್ಗೆ ಮನೆಯಲ್ಲಿ ಪಾಲಕರು ಯಾವ ರೀತಿಯಲ್ಲಿ ಧಾಟಿಯಲ್ಲಿ ಮಾತನಾಡುತ್ತಾರೆ ಎಂಬುದು ಸಹ ಮಕ್ಕಳ ಮನೋಭೂಮಿಕೆಯನ್ನು ರೂಪಿಸುತ್ತದೆ. ಒಂದು ಕಣ್ಣು ಅಥವಾ ಕೈ, ಕಾಲು ದುರ್ಬಲವಾಗಿರುವವರನ್ನೂ ಸ್ಥೂಲಕಾಯರನ್ನೂ ಎತ್ತರ ಕಡಿಮೆ ಇರುವವರನ್ನೂ ಸಹ ಸಮಾಜ ತುಂಬ ಅಸೂಕ್ಷ್ಮವಾಗಿ ಪ್ರಸ್ತಾಪಿಸುತ್ತಿರುತ್ತದೆ.



ಜ್ಞಾನೇಂದ್ರಿಯಗಳಲ್ಲಿ ಒಂದು ದುರ್ಬಲವಾಗಿದ್ದರೆ ಆ ವ್ಯಕ್ತಿಯ ಇತರ ಜ್ಞಾನೇಂದ್ರಿಯಗಳು ಹೆಚ್ಚಿನ ಚುರುಕನ್ನು, ಕಸುವನ್ನು ಹೊಂದಿರುವುದರ ಬಗ್ಗೆ ಮಕ್ಕಳಿಗೆ ಮನವರಿಕೆ ಮಾಡಿಕೊಡುವುದರ ಅಗತ್ಯ ಇದೆ. ಅವರನ್ನು 'ಭಿನ್ನ ಸಮರ್ಥ'ರನ್ನಾಗಿ ಬಿಂಬಿಸಬೇಕಿದೆ. ಅದನ್ನು ಬಿಟ್ಟು ಒಂದು 'ನಿಷ್ಪ್ರಯೋಜಕ ಕನಿಕರ'ದ ಅಚ್ಚಿನಲ್ಲಿ ಅವರನ್ನು ನೂಕಿ ಛದ್ಮವೇಷ ವ್ಯಂಗ್ಯ ಸ್ಥಿರ ಚಿತ್ರವಾಗಿಸಿಬಿಡುತ್ತದೆ.

ಸಾಹಿತ್ಯ, ಚಲನಚಿತ್ರ, ನಾಟಕಗಳಲ್ಲಿ ಅವುಗಳು ಬರುವ ರೀತಿಯೇ ಬೇರೆ. ಅಲ್ಲಿ ಒಂದು ಸಂಘರ್ಷದ, ಕಥನದ ಯಾನ ಇರುತ್ತದೆ. ಅದೊಂದು ಚಪ್ಪಟೆ ಸ್ಥಿರ ಚಿತ್ರವಾಗದೆ ಒಂದು ಜೀವಂತ ಪಾತ್ರವಾಗುತ್ತದೆ. ಆದರೊಡನೆ ಒಂದು ನಂಟು ಪ್ರಾಪ್ತವಾಗುತ್ತದೆ. ಅಲ್ಲೂ ನಡೆಯುವುದು ಪರಕಾಯ ಛದ್ಮವೇಷವೇ. ಮನುಜ ಪ್ರಪಂಚದ ವಿವಿಧ ಸ್ಥಿತಿ ಮತ್ತು ಸಾಧ್ಯತೆಗಳ ವಿನ್ಯಾಸಗಳಲ್ಲಿ ಪ್ರಥಃಕ್ಕರಿಸಿ ಹಾಯುವ ಛದ್ಮವೇಷಗಾರಿಕೆ ಅದು. ಪ್ರತಿ ವೇಷವೂ ಒಂದು ಪರ್ಯಾಯ ಜೀವನದ ಪ್ರವೇಶ ದ್ವಾರ. ವಾಡಿಕೆಯಿಂದ ಸಹಾನುಭೂತಿ ಪದದ ಅರ್ಥ ಕೇವಲ ಕನಿಕರ ಅಥವಾ ಕರುಣೆ ಎನ್ನುವಷ್ಟು ಸರಳೀಕೃತಗೊಂಡಿದೆ. ಸಹ ಅನುಭೂತಿ ಅದು. ಅಂತರಂಗದ ನಿಲುಕು ಅಥವಾ ವಿಸ್ತರಣೆ ಇಲ್ಲದೆ ಸಹಾನುಭೂತಿ ಇಲ್ಲ. ಇಂಥ ಸಹಾನುಭೂತಿಯ, ಪರಾನುಭೂತಿಯ ಛದ್ಮಗಾರಿಕೆಯ ಪರಮ ರೂಪಕವೇ ಕೋಡಂಗಿ ಅಥವಾ ವಿದೂಷಕ. ಯಕ್ಷಗಾನದಿಂದ ಹಿಡಿದು ಎಲ್ಲ ನಾಟಕ ರೂಪಗಳಲ್ಲೂ ಮಂಡಿತ ಕಥಾನಕದ alter–ego ಅಥವಾ ಪರ್ಯಾಯ ಸಾಕ್ಷಿ ಪ್ರಜ್ಞೆಯಂತೆ ಕೋಡಂಗಿ ಬರುತ್ತಾನೆ. ಉತ್ತರದ ಹಂಗಿಲ್ಲದ ಪ್ರಶ್ನೆಗಳನ್ನು